**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿ ಸಿ ನಂಃ 391/2022**

ಸಾಕ್ಷಿಯ ಹೆಸರು ಃ ಸಂಜಯ ಗೌಡ ಸಿ.ಡಬ್ಲ್ಯು 2
ತಂದೆಯ ಹೆಸರು ಃ ಶಿವದೇವೆಗೌಡ ಪಿ.ಡಬ್ಲ್ಯು 2
ವಯಸ್ಸು ಃ 23 ವರ್ಷ
ಉದ್ಯೋಗ ಃ ವೈದ್ಯಕೀಯ ವೃತ್ತಿ
ವಾಸ ಸ್ಥಳ ಃ ಬೆಂಗಳೂರು.

**ದಿನಾಂಕಃ 11-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಚಾಸಾ-1, 3 ಮತ್ತು 4 ನನ್ನ ಸ್ನೇಹಿತರು ಮತ್ತು ಸಹ ಪಾಟಿಗಳು ಇರುತ್ತಾರೆ. ಮೃತ ಭಾರ್ಗವ ಇತನು ತೀರಿಕೊಂಡಿದ್ದಾನೆ, ಆತನ ಕೂಡಾ ನಮ್ಮ ಸ್ನೇಹಿತ. ನಾವು ದಿನಾಂಕ 04-02-2021 ರಂದು ಬೆಂಗಳೂರಿನಿಂದ ಪ್ರವಾಸಕ್ಕೆಂದು ಹೊರಟಿದ್ದೆವು. ಆ ಸಮಯದಲ್ಲಿ ನಾವು ನಮ್ಮ ಪ್ರಯಾಣಕ್ಕೆ ಜೂಮ್ ಕಂಪನಿಯ ಕಾರನ್ನು ಬಾಡಿಗೆ ಪಡೆದುಕೊಂಡಿದ್ದೆವು. ಸದರಿ ವಾಹನವನ್ನು ನ್ಯಾಯಾಲಯದ ಮುಂದೆ ಇರುವ ನನ್ನ ಸ್ನೇಹಿತ ಚಲಾಯಿಸುತ್ತಿದ್ದನು. ತರೀಕೆರೆ ದಾಟಿದ ನಂತರದ ರಸ್ತೆಯಲ್ಲಿ ಬೆಳಗಿನ ಜಾವ 5.15 ಸುಮಾರಿಗೆ ನಮ್ಮ ಕಾರು ಅಪಘಾತಕ್ಕೆ ಇಡಾಗಿದೆ. ಕಾಡಿನ ರಸ್ತೆಯಲ್ಲಿ ಹೋಗುವಾಗ ರಸ್ತೆಯ ಅಡ್ಡಲಾಗಿ ಯಾವುದೋ ಒಂದು ಪ್ರಾಣಿ ಬಂದ ಕಾರಣ ಮಿತುನ್ ಇತನು ವಾಹನವನ್ನು ರಸ್ತೆಯ ಪಕ್ಕಕ್ಕೆ ತಿರುಗಿಸಿದ ಕಾರಣ ಮರಕ್ಕೆ ಡಿಕ್ಕಿ ಹೊಡೆದು ಅಪಘಾತ ಆಗಿದೆ. ಚಾಸಾ-1 ಇವರ ಹಣೆಯ ಭಾಗಕ್ಕೆ ಪೆಟ್ಟು ಆಗಿತ್ತು, ನನ್ನ ಮೂಗಿನ ಮೂಳೆ ಮೂರಿದಿತ್ತು, ಹೇಮಂತನಿಗೆ ಮುಂಗೈ ಮುರಿದು ಹೋಗಿತ್ತು. ಮೃತ ಭಾರ್ಗವ ಇತನ ತಲೆಗೆ ತೀವ್ರ ಸ್ವರೂಪದ ಪೆಟ್ಟುಗಳು ಆಗಿದ್ದವು. ಮೊದಲಿಗೆ ಆತನನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿಯ ವೈದ್ಯರ ಸಲಹೆ ಮೇರೆಗೆ ಪ್ರಥಮ ಚಿಕಿತ್ಸೆಯ ನಂತರ ಶಿವಮೊಗ್ಗದ ಮ್ಯಾಕ್ಸ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾನು ಮೇಲೆ ಹೇಳಿದ ಅಪಘಾತ ಆರೋಪಿಯ ತಪ್ಪಿನಿಂದ ಆಗಿದೆ ಎಂದು ಹೇಳಿಕೆ ಕೊಟ್ಟಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ನಾನು ಹೇಳಿದ ಅಪಘಾತ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಅತೀ ವೇಗದ ಚಾಲನೆ ಮತ್ತು ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಆದಾಗ ಏರ ಬ್ಯಾಗ್ಸ ಓಪನ್ ಆಗಿದ್ದವು. ಏರ ಬ್ಯಾಗ್ಸ ಓಪನ್ ಆಗಬೇಕಾದರೆ ಡಿಕ್ಕಿ ಜೋರಾಗಿ ಆಗಬೇಕು ಎಂದರೆ ನನಗೆ ಗೊತ್ತಿಲ್ಲ. ಆ ದಿನ ನಮ್ಮ ವಾಹನ ಕೂಡಾ ವೇಗವಾಗಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ಆರೋಪಿ ನಮ್ಮ ಸ್ನೇಹಿತ ಇರುವ ಕಾರಣ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ.2 ಎಂದು ಗುರುತಿಸಲಾಯಿತು.

CW 2
PW 2



**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಇರುವುದಿಲ್ಲ ಎಂದು ಹೇಳುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಓ***

Sd/-

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***